**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಯವರ ನ್ಯಾಯಾಲಯ, ಮಡಿಕೇರಿ.**

**ಸಿ. ಸಿ. ಸಂಖ್ಯೆ :3252/2024**

| | |
|---|---|
| ಆರೋಪಿಯ ಹೆಸರು | ಉಬೈದುಲ್ಲಾ ಎಂ.ಹೆಚ್. |
| ವಾಸ್ತವ್ಯ | ತಂದೆ: ಪೌತಿ ಹಸನಬ್ಬ,<br>ಪ್ರಾಯ 33 ವರ್ಷ,<br>ವಾಸ: 8 ನೇ ಬ್ಲಾಕ್,<br>ರಾಣಿಪೇಟೆ, ಮಡಿಕೇರಿ ತಾಲ್ಲೂಕು. |

**ಬಿ.ಎನ್.ಎಸ್.ಎಸ್. ಕಲಂ 351 ರನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ -1 : ನೀವು ಸಾಕ್ಷಿದಾರರ ಹೇಳಿಕೆಗಳನ್ನು ತಿಳಿದುಕೊಂಡಿದ್ದೀರಾ?

ಉತ್ತರ : ತಿಳಿದುಕೊಂಡಿದ್ದೇನೆ.

ಪ್ರಶ್ನೆ:2 ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದುದಾರರು ಹಾಗೂ ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು, ನೀವು ಪೊಲೀಸ್ ಇಲಾಖೆಯ ಕಂಪ್ಯೂಟರ್ ಅನ್ನು ನಿರ್ವಹಣೆ ಮಾಡುತ್ತಿದ್ದು, ಏಪ್ರಿಲ್ 2024 ರ ಎರಡನೇ ವಾರದಂದು ನೀವು ಪಿರ್ಯಾದುದಾರರನ್ನು ಭೇಟಿ ಮಾಡಿ ಪೊಲೀಸ್ ಠಾಣೆಯಲ್ಲಿ ಬಿದ್ದಿರುವ ಸ್ಕ್ರ್ಯಾಪ್ ವಸ್ತುವನ್ನು ಖರೀಧಿ ಮಾಡಲು ರೂ.10,00,000/- ಹಣದ ಅವಶ್ಯಕತೆ ಇದೆಯೆಂದು ತಿಳಿಸಿ ನೀವು ಪಿರ್ಯಾದುದಾರಿಂದ ರೂ.10,00,000/- ಹಣವನ್ನು ಸಾಲವಾಗಿ ಪಡೆದು ಸದರಿ ಸಾಲವನ್ನು 4 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ತಿಳಿಸಿ ಸದರಿ ಸಾಲದ ಮರುಪಾವತಿಗಾಗಿ ನೀವು ಕರ್ನಾಟಕ ಬ್ಯಾಂಕ್, ಮಡಿಕೇರಿ ಶಾಖೆಯ ಮುಂಗಡ ಚೆಕ್ಕು ನಂ 213713 ದಿನಾಂಕ 19.08.2024 ರ ಚೆಕ್ ಅನ್ನು ಪಿರ್ಯಾದಿಯವರಿಗೆ ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ : ಸುಳ್ಳು.

ಪ್ರಶ್ನೆ:3 ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಚೆಕ್ಕನ್ನು ಪಿರ್ಯಾದುದಾರರು ನಗಧೀಕರಣಕ್ಕಾಗಿ ಮಡಿಕೇರಿ ಶಾಖೆಯ ಐಸಿಐಸಿಐ ಬ್ಯಾಂಕಿಗೆ ಸಲ್ಲಿಸಿದಾಗ ನಿಮ್ಮ ಖಾತೆಯು **'Payment Stopped by drawer'** ಎಂಬ ಹಿಂಬರಹದೊಂದಿಗೆ ದಿ:21.08.2024 ರಂದು ವಾಪಾಸ್ಸು ಕಳುಹಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ : ಸುಳ್ಳು.

ಪ್ರಶ್ನೆ:4 ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನೀಡಿದ್ದು ನಂತರ ಪಿರ್ಯಾದುದಾರರು ನಿಮಗೆ ವಕೀಲರ ಮೂಲಕ ದಿ:18.09.2024 ರಂದು ಹಣವನ್ನು ಮರುಪಾವತಿ ಮಾಡುವಂತೆ

Ubaidulla M H

ನೋಟೀಸನ್ನು ನೀಡಿದ್ದು ಸದರಿ ನೋಟೀಸು ನಿಮಗೆ ದಿ:19.09.2024 ರಂದು ತಲುಪಿದ್ದರೂ ಇದುವರೆಗೂ ಚೆಕ್ಕಿನ ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ : ಸುಳ್ಳು.

ಪ್ರಶ್ನೆ:5 ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ : ನಾನು ಫಿರ್ಯಾದಿ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ. ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ.

ಪಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 30.06.2025 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಮಡಿಕೇರಿ